

**ಮಳೆ ಬಂದರೆ ಸಂಭ್ರಮಿಸುವುದು ಕೊಡಗಿನ ಪರಂಪರೆ. ಆದರೆ, ಕಳೆದ ಮೂರು ವರ್ಷಗಳಿಂದ ಮಳೆಯೆಂದರೆ ಕೊಡವರು ಬೆಚ್ಚಿಬೀಳುವಂತಾಗಿದೆ. ನದಿಪಾತ್ರಗಳು ಹಿಗ್ಗಿ ಜನವಸತಿ ಪ್ರದೇಶವನ್ನು ಆಪೋಶನತೆಗೆದುಕೊಳ್ಳುತ್ತಿವೆ. ಗುಡ್ಡಗಳು ಕುಸಿದು ನೋಡಿದಲ್ಲೆಲ್ಲ ಕೆಸರುಗದ್ದೆ ಕಾಣಿಸುತ್ತಿದೆ. ಆ ಕೆಸರಿನಲ್ಲಿ ಜೀವಗಳು ಏದುಸಿರು ಬಿಡುತ್ತಿವೆ. ಸ್ವರ್ಗಸದೃಶ ಕೊಡಗಿಗೆ ಆಗಿರುವುದಾದರೂ ಏನು? ಪ್ರಕೃತಿ ಕೊಡಗಿನ ಮೇಲೆ ಮುನಿಸಿಕೊಂಡಿದೆ ಎನ್ನುತ್ತಿದ್ದಾರೆ ಕೆಲವರು. ಇದು ಪ್ರಕೃತಿಯ ಮುನಿಸಲ್ಲ; ನಮ್ಮ ಅತ್ಯಾಸೆಯ ಹಸ್ತಕ್ಷೇಪದ ಪರಿಣಾಮ ಎನ್ನುವವರೂ ಇದ್ದಾರೆ. ಕೊಡಗಿನ ಚಹರೆ ಬದಲಾಗಿರುವುದಕ್ಕೆ ಕಾರಣಗಳನ್ನು ಹುಡುಕಿಕೊಂಡು ಹೋದರೆ, ಮಳೆಗಣತದಲ್ಲಿ ಹೆಚ್ಚಿನ ಬದಲಾವಣೆ ಕಾಣಿಸುವುದಿಲ್ಲ; ಎದ್ದು ಕಾಣಿಸುವುದು ಮನುಷ್ಯರ ವ್ಯಾಪಾರಿ ಹಸ್ತಗಳು.**

**■ ಆದಿತ್ಯ ಕೆ.ಎ.**

### ‘ಮಳೆ ಶುರುವಾದರೆ ನಡುಕ ಶುರುವಾಗುತ್ತದೆ.’

ನಡುಕದ ಮಾತನಾಡುವಾಗ ತಮ್ಮಯ್ಯನವರ ಧ್ವನಿಯೂ ನಡುಗುತ್ತಿತ್ತು. ‘ಮಳೆಯ ಆರಾಧಕರು ನಾವು. ಪ್ರಕೃತಿಯ ಆರಾಧಕರು ನಾವು. ಮಳೆ ಬಂದರೆ ನಮಗೆಲ್ಲ ಸಂತಸ. ಆದರೆ ಈಗ ಮಳೆ ಶುರುವಾದರೆ ನಡುಕ ಶುರುವಾಗುತ್ತಿದೆ’ ಎಂದ ತಮ್ಮಣ್ಣನವರ ಮಾತಿನಲ್ಲಿ ಜೀವದಾಯಿನಿಯಾದ ಮಳೆ ಮೃತ್ಯುದಾಯಕವೂ ಹೌದೆನ್ನುವ ಧ್ವನಿ ಇಣುಕುತ್ತದೆ. ಹಾಗೆಯೇ ಕೊಡಗಿನ ಮಳೆಚಹರೆ ಬದಲಾದ ಸ್ವರೂಪವೂ ಕಾಣಿಸುತ್ತದೆ.

ತಮ್ಮಯ್ಯನವರು ದಶಕಗಳ ಕಾಲದ ಕೊಡಗಿನ ಸ್ಥಿತ್ಯಂತರಕ್ಕೆ ಸಾಕ್ಷಿಪ್ರಜ್ಞೆಯಂತೆ ಇರುವವರು. ‘ ಚಿಕ್ಕವರಿದ್ದಾಗ ಎಂತೆಂಥ ದೊಡ್ಡ ಮಳೆಗಳನ್ನು ಕಂಡಿದ್ದೇವೆ. ಆ ಮಳೆಯ ಮುಂದೆ ಈಗಿನ ಮಳೆಗಳೂ ಏನೂ ಅಲ್ಲ. ಆಗ ಭಾರೀ ಮಳೆ ಸುರಿದರೂ ಈಗಿನಂತೆ ಅನಾಹುತ ಆಗುತ್ತಿರಲಿಲ್ಲ. ಗುಡ್ಡ ಕುಸಿದ ಉದಾಹರಣೆಗಳೂ ಕಡಿಮೆ’ ಎಂದು ತಮ್ಮಯ್ಯನವರು ತಣ್ಣಗೆ ಹೇಳುತ್ತಾರೆ.

ಭಾಗಮಂಡಲದಲ್ಲಿ ಮಾತಿಗೆ ಸಿಕ್ಕಿದ ಹಿರಿಯರಾದ ತಮ್ಮಯ್ಯ, ತಲಕಾವೇರಿಯ ಗಜಗಿರಿ ಕುಸಿದ (ಬ್ರಹ್ಮಗಿರಿ ಸಮೀಪ) ನೋವಿನಲ್ಲಿ ಇದ್ದರು. ಬೆಟ್ಟದ ಕುಸಿತದಿಂದ ತಲಕಾವೇರಿ ಕ್ಷೇತ್ರದ ಪ್ರಧಾನ ಅರ್ಚಕ ನಾರಾಯಣ ಆಚಾರ್ ಹಾಗೂ ಅವರ ಕುಟುಂಬವನ್ನು ಕಳೆದುಕೊಂಡಿದ್ದ ದುಃಖದಲ್ಲಿ ಅವರ ಮನಸ್ಸು ಭಾರವಾಗಿತ್ತು. ಆ ಸಂಕಟದ ನಡುವೆಯೂ ಬದಲಾದ ಕೊಡಗಿನ ಚಿತ್ರಣದ ಬಗ್ಗೆ ಮಾತನಾಡಿದರು.

‘ರಾಜ್ಯದ ಬೇರೆಲ್ಲ ಜಿಲ್ಲೆಗಳಲ್ಲಿ ಬರ ಬಂದರೂ ಕೊಡಗಿನಲ್ಲಿ ಮಾತ್ರ ಮಳೆಯಾಗುತ್ತದೆ. ಈ ಭೂಮಿ ಬಂಜೆಯಲ್ಲ. ಮಳೆ ಸುರಿದರೆ ಮಾತ್ರ ಇಲ್ಲಿ ಕೃಷಿ ಚಟುವಟಿಕೆಗಳು ನಡೆಸಲು ಸಾಧ್ಯ’ ಎಂದರು.